ಕರ್ನಾಟಕ ಸರ್ಕಾರ
Government of Karnataka
ಆಡಳಿತ ತರಬೇತಿ ಸಂಸ್ಥೆ
ಲಲಿತ ಮಹಲ್ ರಸ್ತೆ, ಮೈಸೂರು-570011
Administrative Training Institute
Lalitha Mahal Road, Mysore -570011

ಸಂಖ್ಯೆ: ಆತಸಂ/26/ವಾಹನ/2022-ಆಡಳಿತ-ಆತಸಂ (ಗಣಕ ಸಂಖ್ಯೆ:887310) ದಿನಾಂಕ:18.05.2023

**"ಬಹಿರಂಗ ಹರಾಜು ಪ್ರಕಟಣೆ"**

ವಿಷಯ: ಆಡಳಿತ ತರಬೇತಿ ಸಂಸ್ಥೆಯ ನಾ-ದುರಸ್ಥಿಗಿರುವ ಮಹಿಂದ್ರ ಬೋಲೆರೋ ವಾಹನವನ್ನು ಬಹಿರಂಗ ಹರಾಜು ಮಾಡುವ ಬಗ್ಗೆ.

ಉಲ್ಲೇಖ: ಪ್ರಾದೇಶಿಕ ಸಾರಿಗೆ ಆಯುಕ್ತರು, ಮೈಸೂರು ಇವರು ವಾಹನ ಹರಾಜು ಮಾಡುವ ಸಂಬಂಧ ನೀಡಿರುವ ಪರಿಶೀಲನಾ ವರದಿ ದಿನಾಂಕ: 19-10-2022

ಆಡಳಿತ ತರಬೇತಿ ಸಂಸ್ಥೆಯ ಮಾಲೀಕತ್ವದ ನಾ-ದುರಸ್ಥಿಗಿರುವ ಮಹಿಂದ್ರ ಬೋಲೆರೋ ವಾಹನದ ಬಹಿರಂಗ ಹರಾಜನ್ನು ಸಂಸ್ಥೆಯ ಆವರಣದಲ್ಲಿ ಹೇಗಿದೆಯೋ ಹಾಗೆ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

**1. ಬಹಿರಂಗ ಹರಾಜಿಗೆ ಇಟ್ಟಿರುವ ವಾಹನದ ವಿವರ:**

| ಕ್ರ.ಸಂ | ವಾಹನದ ವಿವರ | |
|---|---|---|
| 1 | ವಾಹನ | 1 |
| 2 | ಮಾದರಿ | ಬೋಲೆರೋ ಜೀಪ್ |
| 3 | ಉತ್ಪನ್ನದ ಸಂಸ್ಥೆ | ಮಹಿಂದ್ರ & ಮಹಿಂದ್ರ ಲಿಮಿಟೆಡ್ |
| 4 | ವರ್ಷ | 2009 |
| 5 | ಚಾಸಿಸ್ ನಂಬರ್ | MA1WE2GBK92F90913 |
| 6 | ಇಂಜಿನ್ ನಂಬರ್ | GB94F62553 |
| 7 | ಇಂಧನ | ಡೀಸೆಲ್ |

**2. ಬಹಿರಂಗ ಹರಾಜು ಈ ಕೆಳಕಂಡ ಷರತ್ತಿಗೆ ಒಳಪಟ್ಟಿರುತ್ತದೆ:**

1. ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ಮುಂಗಡವಾಗಿ ರೂ. 1,500/-ಗಳ ಠೇವಣಿ ಭರಿಸಬೇಕು. ಠೇವಣಿಯನ್ನು ಡಿಡಿ ರೂಪದಲ್ಲಿ ಸಲ್ಲಿಸತಕ್ಕದ್ದು. ಡಿಡಿ ಯನ್ನು ಮಹಾನಿರ್ದೇಶಕರು, ಆ.ತ.ಸಂ ಮೈಸೂರು. ಇವರ ಹೆಸರಿನಲ್ಲಿ ಪಡೆದಿರತಕ್ಕದ್ದು.
2. ಇತರರು ಯಾರೂ ಸಹ ಹರಾಜಿನಲ್ಲಿ ಭಾಗವಹಿಸುವಂತಿಲ್ಲ.
3. ಯಶಸ್ವಿ ಬಿಡ್ಡುದಾರರು ಬಿಡ್ ನ ಮೊತ್ತದ ಶೇ.25 ಹಾಗೂ ಅದಕ್ಕೆ ಅನ್ವಯವಾಗುವ ತೆರಿಗೆಯನ್ನು ಸ್ಥಳದಲ್ಲೇ ಪಾವತಿಸತಕ್ಕದ್ದು, ಉಳಿದ ಶೇ.75 ರ ಮೊಬಲಗನ್ನು ಏಳು ದಿನಗಳ ಒಳಗೆ ಪಾವತಿಸಿ, ವಾಹನವನ್ನು ತಮ್ಮ ವಶಕ್ಕೆ ಪಡೆದುಕೊಳ್ಳಬಹುದು ತಪ್ಪಿದಲ್ಲಿ ಠೇವಣಿ ಹಣವನ್ನು ಮತ್ತು ಶೇ.25 ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ದೂರವಾಣಿ / Tel : 0821-2520906, 2443835, 2443265, 2443265, 2522142, ಫ್ಯಾಕ್ಸ್ / Fax : (0821) 2523899
ಮಿಂಚಂಚೆ / Email : dgatimysore@gmail.com,
ಜಾಲತಾಣ / Website : atimysore.gov.in, sirdmysore.gov.in & siudmysore.gov.in

4. ಬಿಡ್ ದಾರರಿಗೆ ಹರಾಜು ಪ್ರಕ್ರಿಯೆ ಪ್ರಾಧಿಕಾರದಿಂದ ಅಂಗೀಕೃತವಾದ ನಂತರ ಮತ್ತು ಪೂರ್ಣ ಮೊಬಲಗನ್ನು ಪಾವತಿಸಿದ ನಂತರ ಸರಕನ್ನು ತಮ್ಮ ಸ್ವಂತ ಖರ್ಚಿನಲ್ಲಿ ಈಗಿರುವ ಸ್ಥಳದಿಂದ ಸಾಗಿಸಿಕೊಳ್ಳತಕ್ಕದ್ದು.
5. ಬಹಿರಂಗ ಹರಾಜನ್ನು ಯಾವ ಕಾರಣವನ್ನೂ ನೀಡದೇ ರದ್ದುಪಡಿಸುವ ಹಕ್ಕನ್ನು ಮಹಾನಿರ್ದೇಶಕರು ಕಾಯ್ದಿರಿಸಿಕೊಂಡಿರುತ್ತಾರೆ.
6. ಎಲ್ಲಾ ತರಹದ ತಂಟೆ ತಕರಾರುಗಳಿಗೆ, ವ್ಯಾಜ್ಯಗಳಿಗೆ ಮಹಾ ನಿರ್ದೇಶಕರ ತೀರ್ಮಾನವೇ ಅಂತಿಮ ತೀರ್ಮಾನವಾಗಿರುತ್ತದೆ.
7. ಹರಾಜಿಗೆ ಇಟ್ಟಿರುವ ವಾಹನವನ್ನು ಕಛೇರಿಯ ಕೆಲಸದ ಸಮಯದಲ್ಲಿ ದಿನಾಂಕ:20.05.2023 ರಿಂದ 29.05.2023 ರೊಳಗೆ ಸಂಬಂಧಪಟ್ಟ ವಿಭಾಗದಲ್ಲಿ ಪರೀಕ್ಷಿಸಬಹುದಾಗಿರುತ್ತದೆ. ಚಾಲನೆ ಮಾಡಲು ಅವಕಾಶವಿರುವುದಿಲ್ಲ.
8. ನಿಗದಿಪಡಿಸಿರುವ ಕೊನೆಯ ದಿನಾಂಕ ಅನಿವಾರ್ಯ ಕಾರಣಗಳಿಂದ ರಜಾ ದಿನವಾದಲ್ಲಿ, ನಂತರದ ಕೆಲಸದ ದಿನಾಂಕವೇ ಕೊನೆಯ ದಿನಾಂಕವಾಗಿರುತ್ತದೆ.
9. ಬಹಿರಂಗ ಹರಾಜಿನಲ್ಲಿ ಯಾರೂ ಭಾಗವಹಿಸದಿದ್ದಲ್ಲಿ, 1 ತಿಂಗಳ ನಂತರ ಮತ್ತೊಮ್ಮೆ ಹರಾಜು ಪ್ರಕ್ರಿಯೆ ಕೈಗೊಳ್ಳಲು ಕ್ರಮ ವಹಿಸಲಾಗುವುದು.

ಮುಂದುವರೆದು, ದಿನಾಂಕ: 30.05.2023 ರಂದು ಮಧ್ಯಾಹ್ನ 12.00 ಗಂಟೆಗೆ ಗ್ರಂಥಾಲಯ ಆವರಣ, ಆಡಳಿತ ತರಬೇತಿ ಸಂಸ್ಥೆ, ಮೈಸೂರು. ಆವರಣದಲ್ಲಿ ಬಹಿರಂಗ ಹರಾಜು ಮಾಡಲಾಗುವುದು, ಬಹಿರಂಗ ಹರಾಜಿನಲ್ಲಿ ಯಾರೂ ಹೆಚ್ಚಿನ ದರಕ್ಕೆ ಬಿಡ್ ಮಾಡುವರೋ ಅಂತಹವರ ದರವನ್ನು ಪರಿಗಣಿಸಲಾಗುವುದು.

**Signed by Manjula S**
**Date: 22-05-2023 14:30:02**
**ಜಂಟಿ ನಿರ್ದೇಶಕರು (ಆಡಳಿತ)**
**ಆಡಳಿತ ತರಬೇತಿ ಸಂಸ್ಥೆ, ಮೈಸೂರು**

**ಪ್ರತಿಯನ್ನು:-**

1. **ಮಹಾ ಲೇಖಪಾಲಕರು, ಬೆಂಗಳೂರು, ಇವರ ಮಾಹಿತಿಗಾಗಿ.**
2. **ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಇವರಿಗೆ ಮಾಹಿತಿಗಾಗಿ ಹಾಗೂ ಪ್ರಕಟಣೆಯ ಪ್ರತಿಯನ್ನುತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿ.**
3. **ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು, ಮೈಸೂರು ರವರಿಗೆ ಮಾಹಿತಿಗಾಗಿ ಹಾಗೂ ಸದರಿ ಸುದ್ದಿಯನ್ನು ಸ್ಥಳೀಯ ದಿನಪತ್ರಿಕೆಗಳಲ್ಲಿ ಪ್ರಕಟಿಸಲು ಕೋರಿ.**
4. **ನಿರ್ದೇಶಕರು, ಅ.ನ.ಗ್ರಾ.ಸಂ ಆ.ತ.ಸಂ ಆವರಣ ಮೈಸೂರು. ಇವರಿಗೆ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿ.**